# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,**

**ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗ, ಬಸವೇಶ್ವರ ಲೇಔಟ್, 3ನೇ ಮುಖ್ಯರಸ್ತೆ, ಕೈಲಾಶೇಶ್ವರ ದೇವಸ್ಥಾನ ಹಿಂಭಾಗ ಅತ್ತಿಗುಪ್ಪೆ, ಬೆಂಗಳೂರು-40,**

ಸಂಖ್ಯೆ: ಸ.ಕಾ.ನಿ.ಅ/ಗಾ.ಅ/ಪಿಆರ್/548/2020-21 ದಿನಾಂಕ:16-01-2021

## ದಿನಾಂಕ:16/01/2021 ರಂದು ವಾರ್ಡ ಸಂಖ್ಯೆ:132 ಅತ್ತಿಗುಪ್ಪೆ ವಾರ್ಡ ಸಮಿತಿ ಸಭೆ ನಡವಳಿಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆಯು ದಿನಾಂಕ:16-01-2020ರಂದು ಬೆಳ್ಳಿಗೆ 11:00 ಗಂಟೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಗಾಳಿಆಂಜನೇಯ ದೇವಸ್ಥಾನ)ದಲ್ಲಿ ನಡೆದಿರುತ್ತದೆ. ಸಭೆಯ ನಡವಳಿಗಳು ಈ ಕೆಳಕಂಡಂತೆ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ ಬಸವರಾಜ ವೈ. ಅಂಬಿಗೇರ | ನೋಡೆಲ್ ಅಧಿಕಾರಿ | ಸಹಾಯಕ ಕಾನೂನು ಅಧಿಕಾರಿ, ಕಾನೂನು ಕೋಶ | ಹಾಜರಾಗಿರುತ್ತಾರೆ. |
| 2 | ಶ್ರೀ.ಕೆ.ಎಸ್.ಸ್ವಾಮಿ | ಕಾರ್ಯದರ್ಶಿಗಳು | ಸಹಾಯಕ ಅಭಿಯಂತರರು ವಾರ್ಡ ನಂ.132 | ಹಾಜರಾಗಿರುತ್ತಾರೆ. |
| 3 | ಶ್ರೀ ಮಾರುತಿ ಪಿ. ಸೇಟ್ | ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ ನಂ.132 | ಹಾಜರಾಗಿರುತ್ತಾರೆ. |
| 4 | ಶ್ರೀ.ಗಂಗಣ್ಣಯ್ಯ | ಸದಸ್ಯರು | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.132 | ಹಾಜರಾಗಿರುತ್ತಾರೆ. |
| 5 | ಶ್ರೀ.ಬಿ.ಪ್ರಕಾಶ್ | ಸದಸ್ಯರು | ಕಂದಾಯ ಪರಿವೀಕ್ಷಕರು ವಾರ್ಡ್ ನಂ.132 | ಹಾಜರಾಗಿರುತ್ತಾರೆ. |
| 6 | ಶ್ರೀ.ಎಂ.ಹನುಮಂತ್ ರಾಜ್ | ಸದಸ್ಯರು | ಹಿರಿಯ ಪರಿವೀಕ್ಷಕರು ಪಶುಪಾಲನ | ಹಾಜರಾಗಿರುತ್ತಾರೆ. |

16/1/2021

ASSISTANT LAW OFFICER
Bruhat Bengaluru Mahanagara Palike
Bengaluru

| | | | | |
|---|---|---|---|---|
| | | | ಇಲಾಖೆ ಬಿಬಿಎಂಪಿ | |
| 7 | ಶ್ರೀ.ಸಿ.ನಾರಾಯಣ | ಸದಸ್ಯರು | ಅಧ್ಯಕ್ಷರು ಚಂದ್ರಾ ಬಡಾವಣೆ ನಿವಾಸಿಗಳ ಸಂಘ | ಹಾಜರಾಗಿರುತ್ತಾರೆ. |
| 8 | ಸುಹಾಸಿನಿ.ಬಿ.ಎಸ್ | ಸಾರ್ವಜನಿಕರು | ಸಿಸಿ(ಸಿಪಿಪಿ) | ಹಾಜರಾಗಿರುತ್ತಾರೆ. |
| 9 | ಸ್ರೀ.ಜಿ.ಸಿ.ಬಾಲರಾಜ್ | | ಕಾಮಗಾರಿ ನಿರೀಕ್ಷಕರು ವಾರ್ಡ್–132. | ಹಾಜರಾಗಿರುತ್ತಾರೆ. |
| 10 | ಶ್ರೀ.ವಾಸುದೇವ್ ಮೂರ್ತಿ | ಗುತ್ತಿಗೆದಾರರು | ಘನತ್ಯಾಜ್ಯ ಸಂಗ್ರಹಣೆಗಾರರು ವಾರ್ಡ್–132. | ಹಾಜರಾಗಿರುತ್ತಾರೆ. |
| 11 | ಡಾ॥ ಮಂಜುನಾಥ್ | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿಗಳು | ಹಾಜರಾಗಿರುತ್ತಾರೆ. |
| 12 | ಶ್ರೀ.ಜಗನಾಥ್ | ಸದಸ್ಯರು | ಕಿರಿಯ ಅಭಿಯಂತರರು (ಬೆಸ್ಕಾಂ) | ಹಾಜರಾಗಿರುತ್ತಾರೆ. |
| 13 | ಡಾ॥ ರಘುರಾಮ್ | ವೈದ್ಯರು | ವಾರ್ಡ್–132 | ಹಾಜರಾಗಿರುತ್ತಾರೆ. |
| 14 | ಶ್ರೀಮತಿ.ವಾಣಿ.ಎಸ್ | ಸದಸ್ಯರು | ಮಹಿಳಾ ಪ್ರತಿನಿಧಿಗಳು | ಹಾಜರಾಗಿರುತ್ತಾರೆ. |
| 15 | ಶ್ರೀ.ಎನ್.ಕೃಷ್ಣಮೂರ್ತಿ | ಸದಸ್ಯರು | ತೋಟಗಾರಿಕೆ | ಹಾಜರಾಗಿರುತ್ತಾರೆ. |

ವಾರ್ಡ್ ಕಮಿಟಿ ಸಭೆಯನ್ನು ನಡೆಸುವ ಕುರಿತಾಗಿ ದಿನಾಂಕ:16–1–2021ರಂದು ಸಭೆಯ ಸೂಚನಾ ಪತ್ರವನ್ನು ವಾರ್ಡ್–132ಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಕಳುಹಿಸಿಕೊಡಲಾಗಿರುತ್ತದೆ. ಹಾಗೂ ವಾರ್ಡ್–132 ವಾಟ್ಸ್ ಆಫ್ ಗ್ರೂಪ್ ಗೆ ನೋಟಿಸನ್ನು ಹಾಕಲಾಗಿರುತ್ತದೆ.

ಸಭೆಯ ಪ್ರಾರಂಭಿಕ ಹಂತದಲ್ಲಿ ವಾರ್ಡ ಸಮಿತಿಯ ಅಧ್ಯಕ್ಷರು ಹಾಗೂ ಸಹಾಯಕ ಕಾನೂನು ಅಧಿಕಾರಿ ರವರು ದಿನಾಂಕ:02–01–2021 ರಂದು ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಈ ಹಿಂದೆ ಸಭೆಯ ನಡವಳಿಯನ್ನು ದಾಖಲಿಸಿರುವಂತೆ ಸಭೆಯಲ್ಲಿ ಓದಲಾಯಿತು.

ಮೇಲೆ ಹಾಜರಿದ್ದ ಅಧಿಕಾರಿಗಳು ಮತ್ತು ಸಮೀತಿ ಸದಸ್ಯರು ವಾರ್ಡ್ ವ್ಯಾಪ್ತಿಯ ಜಲಮಂಡಳಿ, ಬೆಸ್ಕಾಂ, ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಇಲಾಖೆ, ಕಂದಾಯ ಮತ್ತು ಕಾಮಗಾರಿಕೆ ಇಲಾಖೆಗಳಿಗೆ ಸಂಬಂಧಿಸಿದಂತೆ, ಪ್ರಸ್ತುತ ಇರುವ ಸಮಸ್ಯೆಗಳನ್ನು ಮತ್ತು ಅವುಗಳನ್ನು ಪರಿಹಾರ ಮಾಡುವ ಕುರಿತಂತೆ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

1. **ಕೋವಿಡ್–19**: ಕೋವಿಡ್–19 ವೈರಸ್ ಪರೀಕ್ಷೆ ವಾರ್ಡ್ ಮಟ್ಟದಲ್ಲಿ ನಡೆಯುತ್ತಿದ್ದು ವಾರ್ಡ್ ಮಟ್ಟದಲ್ಲಿ ಕೋರೊನ ಪಾಸಟೀವ್ ಪ್ರಕರಣಗಳು ಕಂಡುಬರುತ್ತಿಲ್ಲವೆಂದು ಹಿರಿಯ ಆರೋಗ್ಯ

– 11/1/2021

ASSISTANT LAW OFFICER
Bruhat Bengaluru Mahanagara Palike
Bengaluru

ಪರಿವೀಕ್ಷಕರು ಸಭೆಗೆ ತಿಳಿಸಿರುತ್ತಾರೆ. ಇದಲ್ಲದೇ ವ್ಯಾಕ್ಸಿನ್ ನೀಡುವಿಕೆ ವಾರ್ಡ್‌ನಲ್ಲಿ ಪ್ರಾರಂಭಿಸಲಾಗುವುದೆಂದು ತಿಳಿಸಿರುತ್ತಾರೆ.

2. **ಘನತ್ಯಾಜ್ಯ ನಿರ್ವಹಣೆ:** ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ನಿರ್ವಹಣೆ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡುತ್ತಾರೆ. ವಾರ್ಡ್‌ನಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ಸೂಚಿಸಲಾಯಿತು. ಮನೆಮನೆಗಳಿಂದ ಕಸ ಸಂಗ್ರಹಣೆ ಮಾಡಲು ಒಟ್ಟು ನಿಯೋಜಿಸಲಾಗಿರುವ ಪೌರಕಾರ್ಮಿಕರ ಸಂಖ್ಯೆಯನ್ನು ಮತ್ತು ಆಟೋ ಟಿಪ್ಪರ್‌ಗಳ ಕಾರ್ಯನಿರ್ವಹಿಸುವ ಸಂಖ್ಯೆಗಳನ್ನು ಕಾಲಕಾಲಕ್ಕೆ ವಾರ್ಡ್ ಮಟ್ಟದ ವಾಟ್ಸ್‌ಆಫ್ ಗ್ರೂಪ್‌ಗೆ ಹಾಕಲು ಈ ಹಿಂದಿನ ಸಭೆಯಲ್ಲಿ ತಿಳಿಸಿ ಸೂಚಿಸಲಾಗಿತ್ತು. ಆದರೆ ಕಿರಿಯ ಆರೋಗ್ಯ ಪರಿವೀಕ್ಷಕರು ಸದರಿ ಕಾರ್ಯವನ್ನು ಮಾಡಿರುವುದಿಲ್ಲ. ಆದ್ದರಿಂದ ವಾರ್ಡ್‌ನಲ್ಲಿ ದಿನಾಲು ಕೆಲಸಕ್ಕೆ ಹಾಜರಾಗುವ ಪೌರಕಾರ್ಮಿಕರ ಮತ್ತು ಟಿಪ್ಪರ್ ಸಂಖ್ಯೆಯನ್ನು ವಾಟ್ಸ್‌ಆಫ್ ಗ್ರೂಫ್‌ಗೆ ಹಾಕಲು ಸಭೆಯು ಸೂಚಿಸಿದೆ.

ಕಿರಿಯ ಆರೋಗ್ಯ ಪರಿವೀಕ್ಷಕರು ಮನೆಮನೆಗಳಿಂದ ಮತ್ತು ವಾಣಿಜ್ಯ ಸಂಕೀರ್ಣಗಳಿಂದ ತ್ಯಾಜ್ಯವನ್ನು ವಿಂಗಡಿಸಿ, ನೀಡುತ್ತಿರುವ ಬಗ್ಗೆ ಪ್ರತಿದಿನ ಪರಿಶೀಲಿಸಿ ಕ್ರಮಕೈಗೊಳ್ಳಲು ಸೂಚಿಸಲಾಯಿತು. ಕಾಲಕಾಲಕ್ಕೆ ಘನತ್ಯಾಜ್ಯ ನಿರ್ವಹಣೆ ಮಾಹಿತಿಯನ್ನು ನೋಡಲ್ ಅಧಿಕಾರಿ ಗಮನಕ್ಕೆ ತರಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸಭೆಯು ಸೂಚಿಸಿದೆ.

3. **ವಾರ್ಡ ಮಟ್ಟದ ಕಾಮಗಾರಿ:** ಪಾಲಿಕೆಯ ಕಂದಾಯ ಪರಿವೀಕ್ಷಕರು ಹೊಸದಾಗಿ ನಿರ್ಮಾಣ ಮಾಡುತ್ತಿರುವ ಶಾಪೀಂಗ್ ಕಾಂಪ್ಲೆಕ್ಸ್ ನ ಹತ್ತಿರವಿರುವ ವಾರ್ಡ್ ಕಛೇರಿಗೆ ಸೂಕ್ತ ಶೌಚಾಲಯವನ್ನು ವ್ಯವಸ್ಥೆ ಮಾಡಲು ಹಾಗೂ ಶಾಪೀಂಗ್ ಕಾಂಪ್ಲೆಕ್ಸ್‌ನಲ್ಲಿ ನಡೆಯುವ ಅನೈತಿಕ ಚಟುವಟಿಕೆಗಳನ್ನು ನಿಲ್ಲಿಸಲು ಮತ್ತೊಮ್ಮೆ ಈ ಸಭೆಯಲ್ಲಿ ಕೋರಿಕೊಂಡಿರುತ್ತಾರೆ. ಈ ವಿಷಯದಲ್ಲಿ ಶೌಚಾಲಯ ನಿರ್ಮಾಣ ಸೂಕ್ತ ವ್ಯವಸ್ಥೆ ಕಲ್ಪಿಸಲು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:132ರವರಿಗೆ ಸಭೆ ಸೂಚಿಸಿದೆ.

4. **ಅರಣ್ಯ ವಿಭಾಗ:** ಈ ಹಿಂದಿನ ದಿನಾಂಕ:05-12-2020 ಮತ್ತು ದಿನಾಂಕ:02-01-2021ರಂದು ನಡೆದ ಸಭೆಯಲ್ಲಿ ಹಾಜರಿದ್ದ ಸದಸ್ಯರಾದ ಶ್ರೀ ಸಿ.ಹೆಚ್.ಪೈ.ರವರು ವಿಲೇಜ್ ಹೈಪರ್ ದಿಂದ ಅಂತಿಮ ರಸ್ತೆ ರವರಿಗೂ ಬೆಳೆದ ಗಿಡಮರಗಳ ರೆಂಬೆಕೊಂಬೆಗಳನ್ನು ಕತ್ತರಿಸಲು ಕೋರಿಕೊಂಡಿರುತ್ತಾರೆ. ಸದರಿರವರ ಕೋರಿಕೆಯನ್ನು ಇಲ್ಲಿಯವರೆಗೆ ಪಾಲಿಕೆಯು ಪಾಲಿಸಿಲ್ಲವೆಂದು ಮತ್ತೊಮ್ಮೆ ಸಭೆಯ ಗಮನಕ್ಕೆ ತರುತ್ತಾ ತೆರವುಗೊಳಿಸಲು ಕೋರಿಕೊಂಡಿರುತ್ತಾರೆ. ಏಕೆಂದರೆ ಮರಗಳು ರೆಂಬೆ ಕೊಂಬೆಗಳ ನೆರಳಿನಿಂದಾಗಿ ಬೀದಿ ದೀಪಗಳ ಬೆಳಕು ಸರಿಯಾಗಿ ಬೀಳುತ್ತಿಲ್ಲವೆಂದು ಮತ್ತೊಮ್ಮೆ ಚರ್ಚಿಸಲಾಯಿತು. ಇದರ ಕುರಿತ್ತಾಗಿ ದಕ್ಷಿಣ ವಲಯದ ಅರಣ್ಯಾಧಿಕಾರಿಗಳೂ ಕ್ರಮವಹಿಸಲು ಸಭೆಯು ಸೂಚಿಸಿದೆ.

5. **ವಾರ್ಡನಲ್ಲಿರುವ ಘುಟ್‌ಪಾತ್:**ಗಳನ್ನು ಒತ್ತುವರಿ ಮಾಡಿದ್ದರೆ ತೆರವುಗೊಳಿಸಲು ಹಾಗೂ ರಸ್ತೆಗುಂಡಿಗಳನ್ನು ಮುಚ್ಚಲು ಮತ್ತು ಅನಧೀಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿ

16/1/2021
ASSISTANT LAW OFFICER
Bruhat Bengaluru Mahanagara Palike
Bengaluru

ಮಾನ್ಯ ಆಯುಕ್ತರವರ ಆದೇಶದ ಮೇರೆಗೆ ವಾರ್ಡ್ ನಲ್ಲಿರುವ ಫುಟ್‌ಪಾತ್‌ಗಳನ್ನು ಮತ್ತು ಬೀದಿಗಳನ್ನು ಸರಿಪಡಿಸಲು ಅಂತಹ ಜಾಗಗಳನ್ನು ಗುರುತಿಸಿ ಸಭೆ ಗಮನಕ್ಕೆ ತರಲು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:132ರವರನ್ನು ಕೋರುತಾ ಸೂಕ್ತ ಕ್ರಮಕೈಗೊಳ್ಳಲು ಸಭೆ ಸೂಚಿಸಿದೆ.

6. **ಬೀದಿ ದೀಪಗಳ ನಿರ್ವಹಣೆ:** ಈ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಹಿಂದಿನ ಸಭೆಯಲ್ಲಿಯು ಚರ್ಚಿಸಲಾಯಿತು. ಸ್ಕೈಲೈನ್ ಸಿಟಿ ಅಪಾರ್ಟಮೆಂಟ್ ನ ಎದುರುಗಡೆ ಇರುವ ಪಾರ್ಕ್‌ನ ಸುತ್ತಮುತ್ತ ಬೀದಿ ದೀಪಗಳನ್ನು ಅಳವಡಿಸಲು ಮತ್ತು ದಿವಾರ್ ಹೋಟೆಲ್ ಸಿಗ್ನಲ್‌ನಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ ಕ್ರಮವಹಿಸಲು ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ) ರವರಿಗೆ ಕ್ರಮಕೈಗೊಳ್ಳಲು ಸಭೆ ಸೂಚಿಸಿದೆ. ಹಾಗೂ ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರ ಪರವಾಗಿ ಕುಮಾರ್ ರವರು ಹಾಜರಾಗಿದ್ದು ನಾವು ಕಾಲಕಾಲಕ್ಕೆ ದೀಪವನ್ನು ಅಳವಡಿಸಲು ಸಿದ್ದರಿದ್ದು ಆದರೆ ಪಾಲಿಕೆ ಅಧಿಕಾರಿಗಳು ದೀಪವನ್ನು ಪೂರೈಸಬೇಕಾಗಿರುತ್ತದೆಂದು ಸಭೆಗೆ ತಿಳಿಸಿರುತ್ತಾರೆ. ಆದ್ದರಿಂದ ಕಾರ್ಯಪಾಲಕ ಅಭಿಯಂತರರು(ವಿದ್ಯುತ್-ದಕ್ಷಿಣ) ರವರು ಅಗತ್ಯ ದೀಪಗಳನ್ನು ಗುತ್ತಿಗೆದಾರರಿಗೆ ನೀಡಲು ಹಾಗೂ ನಿರ್ವಹಣೆಗಾರರನ್ನು ಸರಿಯಾದ ರೀತಿಯಲ್ಲಿ ಮೇಲ್ವಿಚಾರಣೆ ಮಾಡಬೇಕೆಂದು ಸಭೆಯು ಸೂಚಿಸಿದೆ.

7. **ರಸ್ತೆಯ ಗುಂಡಿ:** ಮುಚ್ಚುವ ಬಗ್ಗೆ ಚರ್ಚಿಸಲಾಯಿತು. ರಸ್ತೆಯ ಗುಂಡಿಗಳನ್ನು ಕಾಲಕಾಲಕ್ಕೆ ಗುರುತಿಸಿ ಮುಚ್ಚಲು ಕ್ರಮಕೈಗೊಳ್ಳಲಾಗುತ್ತಿದೆಂದು ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ. ಸಭೆಗೆ ರಸ್ತೆ ಗುಂಡಿಯನ್ನು ಮುಚ್ಚಲು ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಹಾಜರಾಗಿರುವುದಿಲ್ಲ. ಮಾನ್ಯ ಆಯುಕ್ತರು ಈಗಾಗಲೇ ರಸ್ತೆ ಗುಂಡಿಗಳಲ್ಲಿ ಸಾರ್ವಜನಿಕರು ಬಿದ್ದು ಅಪಘಾತ ಉಂಟಾಗಿ ಗಾಯಾಳುಗಳಾಗಿ ಸಾವು ಉಂಟಾದ್ದಲ್ಲಿ ಪರಿಹಾರ ನೀಡಲಾಗುವುದೆಂದು ಪ್ರಕಟಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:132 ಮತ್ತು ರಸ್ತೆ ಗುಂಡಿಗಳನ್ನು ಮುಚ್ಚಲು ಗುತ್ತಿಗೆ ಪಡೆದ ಗುತ್ತಿಗೆದಾರರು ಮತ್ತು ವಾರ್ಡ್‌ನಲ್ಲಿರುವ ಎಲ್ಲಾ ರಸ್ತೆಗುಂಡಿಗಳನ್ನು ಮತ್ತು ಗಣಪತಿ ಸರ್ಕಲ್ ವಾಲ್ ರಿಪೇರಿ ಮತ್ತು ಗುಂಡಿಗಳನ್ನು ಮುಚ್ಚಳ್ಳು ಕ್ರಮವಹಿಸಬೇಕೆಂದು ಕಾಲಕಾಲಕ್ಕೆ ಮುಚ್ಚಲು ಸಭೆಯು ಸೂಚಿಸಿದೆ.

8. **BWSSB:** ಸದರಿ ಇಲಾಖೆಯಿಂದ ನಿಯೋಜಿಸಿದ ಅಧಿಕಾರಿಯು ಅನಿವಾರ್ಯ ಕಾರಣಗಳಿಂದ ಹಾಜರಾಗಿರುವುದಿಲ್ಲ. ಮುಂದಿನ ಸಭೆಯಲ್ಲಿ ತಪ್ಪದೇ ಹಾಜರಾಗಲು ಕೋರಿದೆ. ಹಾಗೂ ಈ ಹಿಂದಿನ ವಾರ್ಡ್ ಕಮಿಟಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅನುಷ್ಠಾನಗೊಳಿಸಲು BWSSB ಇಲಾಖೆಗೆ ಸೂಚಿಸಿದೆ.

9. **ತೆರಿಗೆ:** ಸಭೆಯಲ್ಲಿ ಹಾಜರಿದ್ದ ಕಂದಾಯ ಪರಿವೀಕ್ಷಕರಿಗೆ ತೆರಿಗೆ ವಸೂಲಾತಿಯನ್ನು ಮಾಡಲು ಹಾಗೂ ಸುಸ್ತಿದಾರರಿಗೆ ನೋಟಿಸು ಜಾರಿ ಮಾಡಿ ವಸೂಲಾತಿ ಕ್ರಮಕೈಗೊಳ್ಳುವುದು ಹಾಗೂ ಕಂದಾಯ ವಸೂಲಾತಿ ಮಾಡುತ್ತಿರುವ ಬಗ್ಗೆ ವಿವರವನ್ನು ನೋಡೆಲ್ ಅಧಿಕಾರಿರವರಿಗೆ ವರದಿ ನೀಡಲು ಈ ಹಿಂದಿನ ಸಭೆಯಲ್ಲಿ ಸೂಚಿಸಲಾಗಿತ್ತು ಆದರೆ ಕಂದಾಯದ ವಿವರವನ್ನು

ASSISTANT LAW OFFICER
Bruhat Bengaluru Mahanagara Palike
Bengaluru

ಸಲ್ಲಿಸಿರುವುದಿಲ್ಲ ಆದ್ದರಿಂದ ಮುಂದಿನ ಸಭೆಗೆ ಕಂದಾಯ ಪರಿವೀಕ್ಷಕರು ವಾರ್ಡ್ ಮಟ್ಟದಲ್ಲಿ ಸಂಗ್ರಹವಾಗುವ ತೆರಿಗೆ ವಿವರವನ್ನು ಸಭೆಗೆ ಸಲ್ಲಿಸಲು ಸೂಚಿಸಿದೆ.

10. **ಪಶುಪಾಲನೆ:** ಪಾಲಿಕೆಯ ಪಶುಪಾಲನ ಇಲಾಖೆಯಿಂದ ಶ್ರೀ.ಹನುಮಂತ್‌ರಾಜು ಎಂಬ ಹಿರಿಯ ನಿರೀಕ್ಷಕರು ಹಾಜರಾಗಿದ್ದರು ಸಭೆಯಲ್ಲಿ ವಾರ್ಡ್ ಮಟ್ಟದಲ್ಲಿ ಮಾಂಸದ ಅಂಗಡಿಗಳಿಂದ ಉತ್ಪತ್ತಿಯಾಗುವ ಮಾಂಸದ ತ್ಯಾಜ್ಯವು ಹೇಗೆ ವಿಲೇವಾರಿ ಮಾಡಲಾಗುತ್ತದೆ ಎಂಬುದನ್ನು ಚಂದ್ರ ಬಡಾವಣೆ ನಿವಾಸಿಗಳ ಸಂಘದ ಅಧ್ಯಕ್ಷರು ಸದರಿ ಅಧಿಕಾರಿಯನ್ನು ಕೋರಲಾಗಿ, ಸದರಿಯವರು ಮಾಂಸದ ಹಸಿ ತ್ಯಾಜ್ಯವನ್ನು ತಮ್ಮ ಇಲಾಖೆಯಿಂದ ನಾವು ನಿರ್ವಹಣೆ ಮಾಡುವುದಿಲ್ಲವೆಂದು ಸಭೆಗೆ ತಿಳಿಸುತ್ತಾ SWM ಇಲಾಖೆ ಮಾಡುತ್ತದೆಂದು ತಿಳಿಸಿರುತ್ತಾರೆ. ಇದಲ್ಲದೇ ಹಸಿ ತ್ಯಾಜ್ಯವು ವಾರ್ಡ್‌ದಿಂದ ಯಾವ ರೀತಿ ವಿಲೇ ಮಾಡುತ್ತದೆಂದು ಸದಸ್ಯರು ಮುಂದಿನ ಸಭೆಯಲ್ಲಿ ತಿಳಿಸಬೇಕೆಂದು ಕೋರಿಕೊಂಡಿರುತ್ತಾರೆ.

11. ಮಾನ್ಯ ವಿಶೇಷ ಆಯುಕ್ತರು(ಆಡಳಿತ)ರವರು ದಿನಾಂಕ:19-12-2020ರಂದು ನಡೆಯುವ ವಾರ್ಡ್ ಕಮಿಟಿ ಸಭೆ ಮತ್ತು ಮುಂದಿನ ಸಭೆಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:10096/2020 ಪ್ರಕರಣದಲ್ಲಿ ಪಾಲಿಕೆಗೆ ನಿರ್ದೇಶಿಸಿರುವಂತೆ Begging and hawking children identification ಸೇವೆ ಕೈಗೊಳ್ಳಲು ಮತ್ತು ಆಯಾ ವಾರ್ಡಿನ ಟ್ರಾಫಿಕ್ ಸಿಗ್ನಲ್‌ಗಳಲ್ಲಿ, ಕೊಳಗೇರಿ, ಬಸ್ ಮತ್ತು ರೈಲ್ವೆ ನಿಲ್ದಾಣ ಇತರೆ ಸ್ಥಳಗಳನ್ನು ಸ್ಥಳೀಯ ನಿವಾಸಿ ಕಲ್ಯಾಣ ಸಂಘ ಹಾಗೂ ಎನ್.ಜಿ.ಓ ಗಳ ಮುಖಾಂತರ ಗುರುತಿಸಿ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಕಲೆ ಹಾಕಲು ಮತ್ತು ಕ್ರಮವಹಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಸಭೆಯಲ್ಲಿ ಚರ್ಚಿಸಲಾಯಿತು. ಹಾಗೂ ಸಭೆಯಲ್ಲಿ ಹಾಜರಿದ್ದ ಚಂದ್ರಾಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಿಗೆ ಮತ್ತು ವಾರ್ಡ್ ಸಮೀತಿ ಸದಸ್ಯರಿಗೆ ಈ ವಿಷಯವನ್ನು ತಿಳಿಸಿ ಸರ್ವೆ ಮಾಡಿ ಮಾಹಿತಿ ನೀಡಲು ವಿನಂತಿಪೂರ್ವಕವಾಗಿ ಕೋರಲಾಗಿರುತ್ತದೆ. ಈ ವಿಷಯದಲ್ಲಿ ವಾರ್ಡ್ ಮಟ್ಟದ ಎಲ್ಲಾ ಅಧಿಕಾರಿಗಳು, ಎನ್.ಜಿ.ಓ ಗಳು ಮತ್ತು ಕ್ಷೇಮಾಭಿವೃದ್ಧಿ ಸಂಘಗಳು ಕ್ರಮವಹಿಸಲು ಕೋರಿದೆ.

ರಿಟ್ ಅರ್ಜಿ ಸಂಖ್ಯೆ:15768/2013 ಪ್ರಕರಣದಲ್ಲಿ ಹೊರಡಿಸಲಾದ ಆದೇಶದನ್ವಯ ಸರ್ಕಾರದ ಆದೇಶದಲ್ಲಿ 2020-2021ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಿ ಶಾಲೆಗೆ ಹಾಜರಾಗಲು ನಗರ ಸ್ಥಳಿಯ ಸಂಸ್ಥೆಗಳು ವಾರ್ಡಿನ ಸದಸ್ಯರನ್ನು ಅದರ ಅಧ್ಯಕ್ಷರನ್ನಾಗಿಸಿ ವಾರ್ಡ್ ಕಮೀಟಿಯನ್ನು ರಚಿಸಲು ಸೂಚಿಸಿರುವುದನ್ನು ಸಭೆಯ ಗಮನಕ್ಕೆ ತರಲಾಗಿರುತ್ತದೆ ಮತ್ತು ಚರ್ಚಿಸಲಾಗಿರುತ್ತದೆ. ಈ ವಿಷಯದಲ್ಲಿ ಕ್ರಮವಹಿಸಲು ವಾರ್ಡ್‌ನಲ್ಲಿರುವ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ಕ್ರಮಕೈಗೊಂಡು ವರದಿಯನ್ನು ವಾರ್ಡ್ ಕಮೀಟಿಗೆ ಸಲ್ಲಿಸಲು ಸೂಚಿಸಿದೆ.

ಸಭೆಯ ವಾರ್ಡ ಸಮಿತಿಯ ಅಧ್ಯಕ್ಷರು ವಾರ್ಡ ಮಟ್ಟದ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿಗಳ ನಡುವೆ ಸಮನ್ವಯ ಸಾಧಿಸಲು ವಾಟ್ಸ್ ಅಪ್ ಗ್ರೂಪ್‌ನ್ನು ಮಾಡಲಾಗಿದ್ದು, ಕಾಲಕಾಲಕ್ಕೆ ಆಯಾ ಸಂಬಂಧಪಟ್ಟ ಇಲಾಖೆ ಸಿಬ್ಬಂದಿ ಮತ್ತು ಅಧಿಕಾರಿಗಳ ಮಾಹಿತಿಯನ್ನು ಹಂಚಿಕೆ ಮಾಡಿಕೊಂಡು ಸಾರ್ವಜನಿಕ ಕುಂದುಕೊರತೆಗಳನ್ನು ಬಗೆಹರಿಸಿಕೊಂಡು ಕ್ರಮವಹಿಸಬೇಕೆಂದು ತಿಳಿಸಿರುತ್ತಾರೆ.

16/1/2021

ASSISTANT LAW OFFICER
Bruhat Bengaluru Mahanagara Palike
Bengaluru

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರೆತಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮತೆಗೆದುಕೊಂಡು ಆಯಾ ಸಂಬಂಧಪಟ್ಟ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು. ಅಧ್ಯಕ್ಷರು ವಂದನಾರ್ಪಣೆ ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದರು.

16/1/2020
ಕಾರ್ಯದರ್ಶಿಗಳು
ವಾರ್ಡ ಸಂಖ್ಯೆ,132, ಅತ್ತಿಗುಪ್ಪೆ

16/1/2021
ನೋಡೆಲ್ ಅಧಿಕಾರಿ
ವಾರ್ಡ ಸಂಖ್ಯೆ,132, ಅತ್ತಿಗುಪ್ಪೆ
ASSISTANT LAW OFFICER
Bruhat Bengaluru Mahanagara Palike
Bengaluru